**ಪಾಠ–6** **ಫೆಬ್ರವರಿ 2–8**

# ಮುದ್ರೆ ಹೊಂದಿದ ದೇವಜನರು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಪ್ರಕಟನೆ 7; 2 ಪೇತ್ರ 3:9–14; ಧರ್ಮೋಪದೇಶಕಾಂಡ 8:11–17; ಪ್ರಕಟನೆ 14:4,5,12; ಪ್ರಕಟನೆ 17:5; ರೋಮಾಪುರದವರಿಗೆ 3:19–24.

**ಸ್ಮರಣವಾಕ್ಯ : "ಅವನು ನನಗೆ– ಇವರು ಮಹಾಹಿಂಸೆಯನ್ನು ಅನುಭವಿಸಿ ಬಂದವರು; ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರ ಮಾಡಿದ್ದಾರೆ (ಪ್ರಕಟನೆ 7:14).**

ಏಳು ಮುದ್ರೆಗಳ ಪ್ರಾರಂಭವು ಕ್ರಿಸ್ತನಲ್ಲಿ ನಂಬಿಕೆ ಇಡುವ ಪ್ರತಿಯೊಬ್ಬ ವ್ಯಕ್ತಿಗೂ ವಿಧೇಯತೆಗಾಗಿ ಆಶೀರ್ವಾದಗಳು ಮತ್ತು ಅವಿಧೇಯತೆಗಾಗಿ ಶಾಪಗಳು ದೊರೆಯುತ್ತದೆ ಎಂದು ನಮಗೆ ತೋರಿಸುತ್ತದೆ. ಮೊದಲ ನಾಲ್ಕು ಮುದ್ರೆಗಳು ದೇವರ ಶಿಸ್ತಿನ ವಿಧಾನಗಳನ್ನು ಅವರ ಜನರ ಆಧ್ಯಾತ್ಮಿಕ ನಿದ್ರಾಲಸ್ಯದಿಂದ ಎಬ್ಬಿಸಲು ಮತ್ತು ಅವರನ್ನು ವಿಜಯಿಗಳನ್ನಾಗಿ ಮಾಡುವಂತೆ ವರ್ಣಿಸುತ್ತದೆ. ಆದರೂ, ದೇವರ ಜನರು ಸುವಾರ್ತೆಗೆ ಪ್ರತಿಕೂಲವಾದ ಪ್ರಪಂಚದಲ್ಲಿ ಅನ್ಯಾಯ ಮತ್ತು ದಬ್ಬಾಳಿಕೆಯನ್ನು ಅನುಭವಿಸುತ್ತಾರೆ. ಆರನೇ ಮುದ್ರೆ ತೆರೆಯುವ ಸಮಯದಲ್ಲಿ, ದೇವರು ತನ್ನ ಜನರಿಗೆ ಹಾನಿ ಮಾಡಿದವರಿಗೆ ವ್ಯವಹರಿಸಲು ಸಿದ್ಧವಾಗಿದೆ.

7ನೇ ಅಧ್ಯಾಯದಲ್ಲಿ ಆರನೇ ಮತ್ತು ಏಳನೇ ಮುದ್ರೆಗಳ ನಡುವೆ ಪರೋಕ್ಷವಾಗಿ ಸೇರಿಸಲಾದ ಮಧ್ಯಂತರವಾಗಿದೆ. ಆರನೇ ಮುದ್ರೆ ನಮ್ಮನ್ನು ಕ್ರಿಸ್ತನ ಎರಡನೇ ಬರೋಣಕ್ಕೆ ತರುತ್ತದೆ. ದುಷ್ಟರು ತೀರ್ಪನ್ನು ಎದುರಿಸುತ್ತಿದ್ದಂತೆ, ಪ್ರಕಟನೆ 7ರಲ್ಲಿ ಅವರು ಕ್ರಿಸ್ತನು ಬರುವ ದಿನದಲ್ಲಿ ಯಾರು ನಿಲ್ಲುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸುತ್ತದೆ : 144000 ಮುದ್ರೆ ಹೊಂದಿದವರು. 144000 ಇತರ ವೈಶಿಷ್ಟ್ಯತೆಗಳನ್ನು ಪ್ರಕಟನೆ 14:1–5 ರಲ್ಲಿ ನೀಡಲಾಗಿದೆ.

ಆರನೇ ಮತ್ತು ಏಳನೇ ತುತೂರಿಗಳ ಮಧ್ಯೆ ಒಂದು ಮಧ್ಯಂತರವನ್ನು ಸೇರಿಸಲಾಗಿದೆ (ಪ್ರಕಟನೆ 10:1–11–14). ಈ ಮಧ್ಯಂತರ, ಎರಡನೇ ಮಹಾ ಎಚ್ಚರಿಕೆಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಅಡ್ವೆಂಟ್ ಮೂಮೆಂಟ್ ಅಡ್ವೆಂಟ್ ಚಳುವಳಿಯ ಉದಯ, ಅಧ್ಯಾಯ 7 ರ ಆರಂಭದ ದೃಶ್ಯಗಳಂತೆಯೇ ಅದೇ ಕಾಲಾವಧಿಯನ್ನು ಹೊಂದಿರುತ್ತದೆ ಮತ್ತು ದೇವರ ಅಂತ್ಯಕಾಲದ ಜನರ ಕೆಲಸ ಮತ್ತು ಅನುಭವವನ್ನು ಕೇಂದ್ರೀಕರಿಸುತ್ತದೆ.

**ಭಾನುವಾರ** **ಫೆಬ್ರವರಿ 3**

## ಗಾಳಿಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದು

ಪ್ರಕಟನೆ 7:1–3 ಜೊತೆಗೆ 2 ಪೇತ್ರ 3:9–14 ಓದಿ. ಯೋಹಾನ ಏನು ನೋಡುತ್ತಾನೆ? ಗಾಳಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ದೇವದೂತರುಗಳಿಗೆ ಎಷ್ಟು ಸಮಯಬೇಕು ಮತ್ತು ಹಾಕುವುದು ಅಂತ್ಯಗೊಂಡಾಗ ಏನಾಗುತ್ತದೆ?

ಹಳೆಯ ಒಡಂಬಡಿಕೆಯಲ್ಲಿ ಗಾಳಿ ವಿನಾಶಕಾರಿ ಪಡೆಗಳಿಗೆ ನಿಲ್ಲುತ್ತದೆ, ಅದರ ಮೂಲಕ ದೇವರು ದುಷ್ಟರ ಮೇಲೆ ತೀರ್ಪು ನಡೆಸುತ್ತಾನೆ (ಯೆರೆಮಿಯಾ 23: 19,20; ದಾನಿಯೇಲ 7:2). ದೇವದೂತರುಗಳು ಮಾನವ ಭಾವೋದ್ರೇಕಗಳ ಉಗ್ರಗಾಳಿಯನ್ನು ಪರೀಕ್ಷಿಸಲು ತಡೆಹಿಡಿಯುವುದರಲ್ಲಿ, ಕಲಹದ ಎಲ್ಲಾ ಅಂಶಗಳು ಸಡಿಲವಾದವು– ಎಲೆನ್ ಜಿ ವೈಟ್, ದ ಗ್ರೇಟ್ ಕಾಂಟ್ರೊವರ್ಸಿ, ಪುಟ 614. ಈ ವಿನಾಶಕಾರಿ ಪಡೆಗಳು ದೈವಿಕ ಮಧ್ಯಸ್ಥಿಕೆಯಿಂದ ತಡೆಗಟ್ಟುತ್ತದೆ. ಅದೇ ಸಮಯದಲ್ಲಿ ದೇವಜನರಿಗೆ ಮುದ್ರೆ ಹಾಕುವುದು ನಡೆಯುತ್ತದೆ.

ಪ್ರಾಚೀನ ಕಾಲದಲ್ಲಿ ಮುದ್ರೆಹಾಕುವುದರ ಪ್ರಾಥಮಿಕ ಅರ್ಥವು ಮಾಲೀಕತ್ವವಾಗಿತ್ತು. ಹೊಸ ಒಡಂಬಡಿಕೆಯಲ್ಲಿ ಮುದ್ರೆ ಹಾಕುವುದರ ಸಾಂಕೇತಿಕ ಅರ್ಥವೇನೆಂದರೆ, "ಕರ್ತನು ತನ್ನ ಜನರನ್ನು ತಿಳಿದಿದ್ದಾನೆ" (2 ತಿಮೊಥಿ 2:19). ದೇವರು ತನ್ನ ಜನರನ್ನು ಗುರುತಿಸುತ್ತಾನೆ ಮತ್ತು ಅವುಗಳನ್ನು ಪವಿತ್ರಾತ್ಮನಿಂದ ಮುದ್ರಿಸುತ್ತಾನೆ (ಎಫೆಸದವರಿಗೆ 1:13,14; ಎಫೆಸ 4:30). ಅಂತ್ಯಕಾಲದಲ್ಲಿ ದೇವರ ನಂಬಿಗಸ್ತ ಜನರಿಗೆ ಹಣೆಯ ಮೇಲೆ ಮುದ್ರೆ ಹಾಕಲಾಗುವುದು, ಅವರು ಆತನ ಆಜ್ಞೆಗಳನ್ನು ಪಾಲಿಸುತ್ತಾರೆ (ಪ್ರಕಟನೆ 14:1,12). ಒಬ್ಬನ ಹಣೆಯ ಮೇಲೆ ಕಾಣುವ ಹಾಗೆ ಹಾಕುವ ಗುರುತಲ್ಲ, ಆದರೆ ಎಲೆನ್ ಜಿ ವೈಟ್ ಹೇಳಿದಂತೆ "ಬೌದ್ಧಿಕವಾಗಿ ಮತ್ತು ಆತ್ಮೀಕವಾಗಿ ಸತ್ಯಕ್ಕೆ ಸ್ಥಿರವಾಗಿ ನಿಲ್ಲುವುದು, ಅಂದರೆ ಅವರನ್ನು (ದೇವರ ಜನರನ್ನು) ಅಲ್ಲಾಡಿಸಲು ಸಾಧ್ಯವಿಲ್ಲ" – ಲಾಸ್ಟ್ ಡೇ ಇವೆಂಟ್ಸ್ ಪುಟ 220. ಇದಕ್ಕೆ ವ್ಯತಿರಿಕ್ತವಾಗಿ, ಅಂತ್ಯದಲ್ಲಿ ಮೃಗದ ಪಕ್ಷದಲ್ಲಿರುವವರಿಗೆ ಮೃಗದ ಗುರುತು ಪಡೆಯುತ್ತಾರೆ (ಪ್ರಕಟನೆ 13:16,17).

ದೇವರ ಮುದ್ರೆಯನ್ನು ಹೊಂದಿದ ದೇವರ ಜನರ ನಂಬಿಕೆಯೂ ಪ್ರತಿ ಪೀಳಿಗೆಯಲ್ಲೂ ಪರೀಕ್ಷಿಸಲ್ಪಟ್ಟಿದೆ. ಏನೇ ಆದರೂ, ಅಂತಿಮ ಸಂಕಟ ಸಮಯದ ನಂಬಿಕೆಯ ಪರೀಕ್ಷೆಯು ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವುದಾಗಿದೆ (ಪ್ರಕಟನೆ 12:17, ಪ್ರಕಟನೆ 14:12). ನಿರ್ದಿಷ್ಟವಾಗಿ, ದೇವರ ನಾಲ್ಕನೇ ಆಜ್ಞೆಗೆ ವಿಧೇಯತೆಯ ಪರೀಕ್ಷೆಯಾಗುತ್ತದೆ (ಪ್ರಕಟನೆ 14:7). ಸತ್ಯವೇದದ ಕಾಲದಲ್ಲಿ ಸಬ್ಬತ್ತು ದೇವರ ಜನರ ಸಂಕೇತವಾಗಿದೆ (ಯೆಹೆಜ್ಕೇಲನು 20:12,20; ಇಬ್ರಿಯರಿಗೆ 4:9,10). ಹಾಗಾಗಿ, ಇದು ಅಂತಿಮ ಸಂಕಟ ಸಮಯದಲ್ಲಿ ದೇವರಿಗೆ ನಿಷ್ಠೆಯ ಸಂಕೇತವಾಗಿದೆ.

ಅಂತ್ಯಕಾಲದ ವೇಳೆಗೆ, ಮುದ್ರೆಯು ಸಹ ಕೊನೆಯ ಏಳು ಉಪದ್ರವಗಳ ವಿನಾಶಕಾರಿ ಶಕ್ತಿಯಿಂದ ಸಂರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತದೆ (ಯೆಹೆಜ್ಕೇಲನು 9:1–11; ಪ್ರಕಟನೆ 7:1–3ರ ಹಿನ್ನೆಲೆಯ ಚಿತ್ರಣವನ್ನು ನೋಡಿರಿ). ಹೀಗಾಗಿ ಪ್ರಕಟನೆ 6:17 ರಲ್ಲಿ ಎದ್ದ ಪ್ರಶ್ನೆಯು ಅಂತಿಮ ಉತ್ತರವನ್ನು ಪಡೆಯುತ್ತದೆ: ದೇವರ ಮುದ್ರೆಯನ್ನು ಒತ್ತಿಸಿಕೊಂಡ ಜನರು ದೇವ ಮಹಾಕ್ರೋಧದ ದಿನದಂದು

ರಕ್ಷಿಸಲ್ಪಟ್ಟವರಾಗಿ ನಿಲ್ಲುತ್ತಾರೆ. ನಮಗೆ ಮುದ್ರೆ ಹಾಕಿದಂತ ಪವಿತ್ರಾತ್ಮವನ್ನು ದುಃಖಿಸಬೇಡಿರಿ ಎಂದು ಪೌಲನು ನಮ್ಮನ್ನು ಎಚ್ಚರಿಸುತ್ತಾನೆ (ಎಫೆಸದವರಿಗೆ 4:30). ಅದರ ಅರ್ಥವೇನು? ಒಬ್ಬನು ಹೇಗೆ ಪವಿತ್ರಾತ್ಮನನ್ನು ನೋಯಿಸುತ್ತಾನೆ? ನಿಮಗೆ ಉತ್ತರ ದೊರೆತಾಗ, ನೋಯಿಸದಿರಲು ನಿಮಗೆ ಸಹಾಯ ಮಾಡಲು ಯಾವ ಆಯ್ಕೆಗಳನ್ನು ನೀವು ಮಾಡಬಹುದು?

**ಸೋಮವಾರ** **ಫೆಬ್ರವರಿ 4**

## ದೇವರ ಮುದ್ರೆ ಒತ್ತಿಸಿಕೊಂಡ ಜನರು

ಪ್ರಕಟನೆ 7:4–8 ಓದಿ. ದೇವರ ಮುದ್ರೆ ಒತ್ತಿಸಿಕೊಂಡ ಜನರ ಸಂಖ್ಯೆ ಎಷ್ಟು? ಆ ನಿರ್ದಿಷ್ಟ ಸಂಖ್ಯೆಯ ಅರ್ಥವೇನು?

ಮುದ್ರೆ ಹಾಕಿಸಿಕೊಂಡವರ ಸಂಖ್ಯೆಯು ಘೋಷಣೆಯು ಮುದ್ರೆ ಮುಕ್ತಾಯಗೊಂಡಿದೆ ಎಂದು ಗುರುತಿಸುತ್ತದೆ. ಇಸ್ರಾಯೇಲ್ಯರ 12 ಕುಲಗಳಿಂದ ಉಲ್ಲೇಖವಾಗಿರುವ ಸಂಖ್ಯೆ ವಾಸ್ತವ ಅಲ್ಲ. ಆದರೆ ಅದು ಏನನ್ನು ಸಂಕೇತಿಸುತ್ತದೆ. 1,44,000 ಸಂಖ್ಯೆ 12 ಬಾರಿ 12 ಬಾರಿ 1000 (12000x12) ಅನ್ನು ಹೊಂದಿರುತ್ತದೆ. ಹನ್ನೆರಡು ದೇವರ ಜನರ ಸಂಕೇತವಾಗಿದೆ : ಇಸ್ರಾಯೇಲ್ಯರ ಹನ್ನೆರಡು ಕುಲಗಳು ಮತ್ತು ಹನ್ನೆರಡು ಮಂದಿ ಅಪೋಸ್ತಲರ ಅಡಿಪಾಯದ ಮೇಲೆ ನಿರ್ಮಿಸಿದ ಸಭೆ (ಎಫೆಸದವರಿಗೆ 2:20). ಹಾಗಾಗಿ 1,44,000 ಸಂಖ್ಯೆಯು ಒಟ್ಟಾಗಿ ದೇವರ ಅಂತ್ಯಕಾಲದ ಜನರ ಆಧಾರವಾಗಿದೆ : "ಎಲ್ಲಾ ಇಸ್ರಾಯೇಲ್ಯರು" (ಯೆಹೂದಿಗಳು ಮತ್ತು ಅನ್ಯರು) ಕ್ರಿಸ್ತನ ತಿರುಗಿ ಬರುವುದಕ್ಕೆ ಸಿದ್ಧರಾದವರು ಮತ್ತು ಮರಣವನ್ನು ನೋಡದೆ ಮಾರ್ಪಾಟಾಗುವವರು ರೋಮಾಪುರದವರಿಗೆ 11:26, 1 ಕೊರಿಂಥದವರಿಗೆ 15:51–53).

ಪ್ರಕಟನೆ 7ರಲ್ಲಿ ಪಟ್ಟಿ ಮಾಡಲಾದ 12 ಕುಲಗಳಲ್ಲಿ ಸ್ಪಷ್ಟವಾಗಿ, ವಾಸ್ತವವಾಗಿಲ್ಲ. ಏಕೆಂದರೆ ಇಸ್ರಾಯೇಲ್ಯರ 12 ಕುಲಗಳು ಉತ್ತರ ಮತ್ತು ದಕ್ಷಿಣ ಸಾಮ್ರಾಜ್ಯಗಳನ್ನೊಳಗೊಂಡಿದೆ, ಈಗ ಅವು ಅಸ್ತಿತ್ವದಲ್ಲಿಲ್ಲ. ಉತ್ತರ ಸಾಮ್ರಾಜ್ಯದ 10 ಕುಲಗಳನ್ನು ಅಶ್ಶೂರದ ವಿಜಯದ ಸಂದರ್ಭದಲ್ಲಿ ಸೆರೆಗೆ ಕರೆದೊಯ್ಯಲಾಯಿತು

(2 ಅರಸುಗಳು 17:6–23), ಅವರು ಬೇರೆ ದೇಶಗಳೊಂದಿಗೆ ಸಂಯೋಜಿಸಲ್ಪಟ್ಟವು. ಆದ್ದರಿಂದ, 12 ಕುಲಗಳು ಜೂಡಾಯಿಸಮ್‌ಅನ್ನು ಒಳಗೊಂಡಿಲ್ಲ.

ಅಲ್ಲದೆ, ಪ್ರಕಟನೆ 7 ರಲ್ಲಿನ 12 ಕುಲಗಳ ಪಟ್ಟಿಯು ಧರ್ಮಶಾಸ್ತ್ರದಲ್ಲಿ ಕಂಡುಬಂದಿಲ್ಲ (ಅರಣ್ಯಕಾಂಡ 1:5–15; ಯೆಹೆಜ್ಕೇಲನು 48:1–29 ಹೋಲಿಸಿ). ರೂಬೆನ್ ಕುಲದ (ಅರಣ್ಯಕಾಂಡ 1:5 ಹೋಲಿಸಿ) ಬದಲಾಗಿ ಯೂದ ಕುಲವನ್ನು ಮೊದಲನೆಯದಾಗಿ ಪಟ್ಟಿ ಮಾಡಲಾಗಿದೆ (ಪ್ರಕಟನೆ 7:5). ಅಲ್ಲದೆ ದಾನ್ ಮತ್ತು ಎಪ್ರಾಯಿಮ್ ಕುಲಗಳು ಅರಣ್ಯಕಾಂಡ 1 ಮತ್ತು 48 ಅಧ್ಯಾಯದ ಪಟ್ಟಿಯಲ್ಲಿ ಸೇರಿವೆ, ಪ್ರಕಟನೆ 7 ರಲ್ಲಿರುವ ಪಟ್ಟಿಯಿಂದ ತೆಗೆಯಲಾಗಿದೆ, ಬದಲಾಗಿ ಯೋಸೇಫ ಮತ್ತು ಲೇವಿ ಕುಲಗಳನ್ನು ಸೇರಿಸಲಾಗಿದೆ (ಪ್ರಕಟನೆ 7:7,8). ಪ್ರಕಟನೆ 7 ರ ಪಟ್ಟಿಯಿಂದೆ ಎಪ್ರಾಯಿಮ್ ಮತ್ತು ದಾನ್ ಕುಲವನ್ನು ಕೈಬಿಡಲು ಸ್ಪಷ್ಟವಾದ ಕಾರಣವೆಂದರೆ, ಹಳೆಯ ಒಡಂಬಡಿಕೆಯಲ್ಲಿ ಈ ಎರಡು ಕುಲಗಳು ಧರ್ಮಭ್ರಷ್ಟರು ಮತ್ತು ವಿಗ್ರಹಾರಾಧಕರಾಗಿದ್ದೆ (1 ಅರಸುಗಳು 12:29,30; ಹೋಶೇಯ 4:17). ಪ್ರಕಟನೆ 7 ರಲ್ಲಿನ ಕುಲಗಳ ಪಟ್ಟಿ ಐತಿಹಾಸಿಕವಲ್ಲ. ಆದರೆ ಆತ್ಮೀಕವಾಗಿದೆ.

ಈ ಎರಡು ಕುಲಗಳವರ ಅಪನಂಬಿಗಸ್ತಿಕೆಯಿಂದ ದೇವರ ಮುದ್ರೆ ಹೊಂದಿದ ಜನರೊಟ್ಟಿಗೆ ಯಾವುದೇ ಸ್ಥಾನವಿಲ್ಲ ಎಂದು ಈ ಪಟ್ಟಿಯಿಂದ ದಾನ್ ಮತ್ತು ಎಫ್ರಾಯಿಮ್‌ಗಳ ಅನುಪಸ್ಥಿತಿಯಲ್ಲಿ ತಿಳಿಸಲಾಗಿದೆ. ಜೊತೆಗೆ, ಹೊಸ ಒಡಂಬಡಿಕೆಯಲ್ಲಿನ ಸಭೆಯನ್ನು ಇಸ್ರಾಯೇಲಿನ 12 ಕುಲಗಳು ಎಂದು ಕರೆಯಲಾಗುತ್ತದೆ (ಯಾಕೋಬ 1:1). ಪ್ರಕಟನೆ 7 ರಲ್ಲಿರುವ 12 ಕುಲಗಳು ಅಂತ್ಯದವರೆಗೂ ಅಸ್ತಿತ್ವದಲ್ಲಿರುವ ಯೆಹೂದ್ಯರ ಮತ್ತು ಅನ್ಯರುಗಳ ದೇವರ ಜನರನ್ನು ಪ್ರತಿನಿಧಿಸುತ್ತದೆ.

ಕಷ್ಟದ ಸಮಯದ ಮೂಲಕ ಬದುಕುವವರಿಗೆ ದೇವರು ಯಾವ ಸತ್ಯವೇದದ ಭರವಸೆಯನ್ನು ನೀಡುತ್ತಾರೆ?

**ಮಂಗಳವಾರ** **ಫೆಬ್ರವರಿ 5**

# ಮಹಾ ಸಮೂಹ

ಪ್ರಕಟನೆ 7:9,10 ಓದಿ. ಈ ಹಂತದಲ್ಲಿ ಯೋಹಾನ ಯಾವ ಸಂತರನ್ನು ನೋಡುತ್ತಾನೆ? ಅವರನ್ನು ಹೇಗೆ ವಿವರಿಸಲಾಗಿದೆ ಮತ್ತು ಅವರು ಎಲ್ಲಿಂದ ಬರುತ್ತಾರೆ? ದೇವರ ಸಿಂಹಾಸನದ ಮುಂದೆ ಏನೆಂದು ಕೂಗುತ್ತಿದ್ದಾರೆ?

ಯಾರಿಂದಲೂ ಎಣಿಸಲಾಗದಷ್ಟು ಸಂಖ್ಯೆಯ "ಮಹಾಜನಸಮೂಹ"ವನ್ನು ಯೋಹಾನನು ನೋಡಿದನು. "ಇವರು ಆ ಮಹಾಹಿಂಸೆಯನ್ನು ಅನುಭವಿಸಿ ಬಂದವರು, ಯಜ್ಞದ ಕುರಿಯಾದಾತನ ರಕ್ತದಲ್ಲಿ ತೊಳೆದು ಶುಭ್ರ ಮಾಡಿದ್ದಾರೆ" (ಪ್ರಕಟನೆ 7:14). ಅಂದರೆ ಅವರು ಒಂದು ವಿಶೇಷ ಗುಂಪಿನ ಜನರು, ಅವರು ಏನೆಲ್ಲಾ ಸಂಕಟವನ್ನು ಎದುರಿಸುತ್ತಿದ್ದರೂ ಸಹ, ಯೇಸುವಿಗೆ ನಂಬಿಗಸ್ತರಾಗಿ ಉಳಿದರು, ನಂಬಿಗಸ್ತಿಕೆಯು ಅವರ ಪರಿಪೂರ್ಣ ನೀತಿಯ ನಿಲುವಂಗಿಯಲ್ಲಿ ಅವು ಮುಚ್ಚಲ್ಪಟ್ಟಿರುವ ಸಾಂಕೇತಿಕವಾಗಿದೆ. "ಯಾತನೆ" ಎಂಬ ಪದವನ್ನು ವಿಶ್ವಾಸಿಗಳು ತಮ್ಮ ನಂಬಿಕೆಗಾಗಿ ಬಳಲುತ್ತಾರೆಂಬ ವಿಷಯಗಳನ್ನು ಸತ್ಯವೇದದಲ್ಲಿ ಪದೇ ಪದೇ ಬಳಸುತ್ತಾರೆ (ಉದಾಹರಣೆಗೆ ವಿಮೋಚನಕಾಂಡ 4:31, ಕೀರ್ತನೆಗಳು 9:9, ಮತ್ತಾಯ 24:9, ಯೋಹಾನ 16:33, ರೋಮಾಪುರದವರಿಗೆ 5:3ನ್ನು ನೋಡಿ). ಹಾಗಿದ್ದರೂ ಸಹ, ಕೆಲವು ಅಡ್ವೆಂಟಿಸ್ಟ್ ವ್ಯಾಖ್ಯಾನಕಾರರು ಈ ಗುಂಪನ್ನು 1,44,000 ದ ಮತ್ತೊಂದು ಪ್ರತಿನಿಧಿಯಾಗಿ ನೋಡುತ್ತಿದ್ದರು ಯುಗ ಯುಗಗಳಿಂದ ತಮ್ಮ ನಂಬಿಕೆಗಾಗಿ ಹಿಂಸೆಯನ್ನು ಅನುಭವಿಸಿದ ಎಲ್ಲಾ ವಿಮೋಚಕರಿಗೆ "ಮಹಾಜನ ಸಮೂಹ"ವು ಉಲ್ಲೇಖವಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬಹುದು.

ಇಲ್ಲಿಯೂ ಸಹ, "ಮಹಾಜನ ಸಮೂಹ" ವನ್ನು ಯಾರೂ ಎಣಿಸುವುದಕ್ಕೆ ಆಗುವುದಿಲ್ಲ, ನಾವು ಎಲ್ಲಾ ಸತ್ಯವೇದಗಳಲ್ಲಿರುವಂತೆ ಮಹಾನ್ ವಿಷಯವಾದ 'ಕೃಪೆಯಿಂದ ರಕ್ಷಣೆ' ಎಂಬ ಯೋಹಾನನ ವಿವರಣೆಯನ್ನು ನಾವು ನೋಡುತ್ತೇವೆ. ಅವರಿಗೆ ನಿತ್ಯಜೀವ, ನೂತನ ಪರಲೋಕ ಮತ್ತು ನೂತನ ಭೂಮಿ, ಕ್ರಿಸ್ತನ ನೀತಿಯನ್ನು ವಿಮೋಚಿಸಲ್ಪಟ್ಟವರು ಮಾತ್ರ ಕೃಪೆಯಿಂದ ಪಡೆಯಬಹುದು.

ಸಿಂಹಾಸನಕ್ಕೆ ಸಮೀಪದಲ್ಲಿ ಒಮ್ಮೆ ಸೈತಾನನ ಕೆಲಸಗಳಲ್ಲಿ ಉತ್ಸುಕರಾಗಿದ್ದವರೂ, ಆದರೆ ಉರಿಯುತ್ತಿರುವ ಮರದ ತುಂಡಂತೆ ಜ್ವಾಲೆಯಿಂದ ಕೀಳಲ್ಪಟ್ಟು, ಆಳವಾದ, ತೀವ್ರ ಭಕ್ತಿಯೊಂದಿಗೆ ತಮ್ಮ ರಕ್ಷಕನನ್ನು ಅನುಸರಿಸುತ್ತಾರೆ. ಮುಂದೆ ಅಸತ್ಯ ಮತ್ತು ಅವಿಶ್ವಾಸ ಮಧ್ಯದಲ್ಲಿ ಕ್ರೈಸ್ತರ ಗುಣಗಳನ್ನು ಪರಿಪೂರ್ಣಗೊಳಿಸಿದವರು, ಕ್ರೈಸ್ತ ಪ್ರಪಂಚವು ಅದು (ಆಜ್ಞೆ) ರದ್ದಾಗಿದೆಯೆಂದು ಘೋಷಿಸಿದಾಗ ದೇವರ ಆಜ್ಞೆಯನ್ನು ಗೌರವಿಸಿದರು ಮತ್ತು ಅವರ ನಂಬಿಕೆಗಾಗಿ ಎಲ್ಲ ಯುಗದ ದಶಲಕ್ಷದಷ್ಟು ಜನರು ಹುತಾತ್ಮರಾಗಿದ್ದಾರೆ ಮತ್ತು ಆಚೆಯ ಕಡೆ 'ಯಾವ ಮನುಷ್ಯನಿಂದಲೂ ಎಣಿಸಲಾಗದಂತ 'ಮಹಾಜನಸಮೂಹ', ಸಕಲ ಜನಾಂಗ, ಕುಲ, ಪ್ರಜೆ, ಭಾಷೆಯನ್ನಾಡುವ ಜನರು... ಸಿಂಹಾಸನದ ಮುಂದೆ, ಯಜ್ಞದ ಕುರಿಯಾದಾತನ ಮುಂದೆ, ಬಿಳಿ ನಿಲುವಂಗಿ ತೊಟ್ಟು ಮತ್ತು ಖರ್ಜೂರದ ಗರಿಗಳನ್ನು ಅವರ ಕೈಗಳಲ್ಲಿ ಹಿಡಿದುಕೊಂಡಿದ್ದರು' ಪ್ರಕಟನೆ 7:9. ಅವರ ಯುದ್ಧವು ಅಂತ್ಯಗೊಂಡಿತು, ಅವರು ಗೆದ್ದರು, ಓಟವನ್ನು ಓಡಿದ್ದಾರೆ ಮತ್ತು ಬಹುಮಾನವನ್ನು ತಲುಪಿದ್ದಾರೆ. ಅವರ ಕೈಯಲ್ಲಿರುವ ಖರ್ಜೂರದ ಗರಿಗಳು ವಿಜಯದ ಸಂಕೇತವಾಗಿದೆ, ಬಿಳಿ ನಿಲುವಂಗಿಯು ಕ್ರಿಸ್ತನ ನಿಷ್ಕಳಂಕ ನೀತಿಯ ಲಾಂಛನವಾಗಿದೆ ಅದು ಈಗ ಅವರದು– ಎಲೆನ್ ಜಿ ವೈಟ್, ದ ಗ್ರೇಟ್ ಕಾಂಟ್ರೊವರ್ಸಿ, ಪುಟ 665.

ಹೌದು, ನಾವು ಕ್ರಿಸ್ತನ ನೀತಿಯಿಂದ ನಂಬಿಕೆಯ ಉಡುಗೊರೆಯಾಗಿ ಹೊಂದಿಸಲ್ಪಟ್ಟಿದ್ದೇವೆ. ಆದರೆ ನಾವು ಆ ನಂಬಿಕೆಯನ್ನು ಕಾಪಾಡಿಕೊಳ್ಳಲು ಮತ್ತು ಶೋಧನೆ ಮತ್ತು ಸಂಕಷ್ಟಗಳ ಮಧ್ಯದಲ್ಲಿ ನಂಬಿಗಸ್ತರಾಗಿ ನಿಲ್ಲುವುದು ಹೇಗೆ? ಅಥವಾ ಹೆಚ್ಚು ಮುಖ್ಯವಾದದ್ದು, ಸುಲಭವಾಗಿ ಮತ್ತು ಸಮೃದ್ಧಿಯ ಕಾಲದಲ್ಲಿ ಆ ನಂಬಿಕೆ ಮತ್ತು ವಿಧೇಯತೆಯನ್ನು ನಾವು ಹೇಗೆ ಕಾಪಾಡಿಕೊಳ್ಳುತ್ತೇವೆ? (ಧರ್ಮೋಪದೇಶಕಾಂಡ 8:12–17 ನೋಡಿ).

**ಬುಧವಾರ** **ಫೆಬ್ರವರಿ 6**

## ಯಜ್ಞದ ಕುರಿಯನ್ನು ಹಿಂಬಾಲಿಸುವವರು

ಪ್ರಕಟನೆ 14:1–5 ಓದಿ. 1,44,000 ಸಂತರ ಮೂರು ಪ್ರಮುಖ ಗುಣ

ಲಕ್ಷಣಗಳು ಯಾವುವು? ಪ್ರಕಟನೆ 14:12 ರಲ್ಲಿ ಅಂತ್ಯಕಾಲದ ಸಂತರ ವಿವರಣೆಗೆ ಈ ಗುಣಲಕ್ಷಣಗಳು ಹೇಗೆ ಸಂಬಂಧಿಸಿವೆ?

ಪ್ರಕಟನೆ 14:4,5 ರಲ್ಲಿ ದೇವರ ಕೊನೆಯ ದಿನದ ಜನರೊಂದಿಗೆ ಸಾಲಾಗಿ "ದೇವರ ಆಜ್ಞೆಗಳನ್ನು ಮತ್ತು ಯೇಸುವಿನ ಮೇಲಿನ ನಂಬಿಕೆಯನ್ನು ಕೈಕೊಂಡು ನಡೆಯುವ" (ಪ್ರಕಟನೆ 14:12) 1,44,000 ಒಂದು ವಿವರಣೆಯಾಗಿದೆ. ಆದಾಗ್ಯೂ, ಅವರು ಸೈತಾನನ ಕ್ರೋಧದ ಪೂರ್ಣತೆಯನ್ನು ಅನುಭವಿಸಿದರು. ಅವರು ಯೇಸುವಿನೊಂದಿಗೆ ಹತ್ತಿರ ಸಂಬಂಧ ಹೊಂದಿದ್ದರಿಂದ ದೃಢವಾಗಿ ನಿಂತರು.

ಪ್ರಕಟನೆ 17:5 ರ ಬೆಳಕಿನಲ್ಲಿ ಯಾವ ಅರ್ಥದಲ್ಲಿ 1,44,000 ಜನರು ಮಹಿಳೆಯರೊಂದಿಗೆ ಅಪವಿತ್ರಗೊಳಿಸಲ್ಪಟ್ಟಿಲ್ಲ? ಅವರ ಪರಿಶುದ್ಧತೆಯ ಗುಣ "ದೇವರಿಗೆ ಪ್ರಥಮ ಫಲವಾಗಿ" ಅವರು ಭೂಮಿಯಿಂದ ವಿಮೋಚಿಸಲ್ಪಟ್ಟರು ಎಂಬ ಅಂಶವು ಹೇಗೆ ಸಂಬಂಧಿಸುತ್ತದೆ (ಪ್ರಕಟನೆ 14:4)?

ಲೈಂಗಿಕ ಅನೈತಿಕತೆಯು ದೇವರಿಗೆ ಅಪನಂಬಿಕೆಯ ಸಂಕೇತವಾಗಿದೆ. ಪ್ರಕಟನೆ 17:5 ಕೊನೆಯ ಕಾಲದ ಜಾರಸ್ತ್ರೀ ಬಾಬೆಲ್ ಮತ್ತು ಅವಳ ಹೆಣ್ಣುಮಕ್ಕಳ ಜೊತೆ ಪ್ರಪಂಚದ ಎಲ್ಲಾ ಜನಾಂಗದವರು ಜಾರತ್ವವನ್ನು ಮಾಡಿದ್ದಾರೆಂದು ಮಾತನಾಡುತ್ತದೆ (ಪ್ರಕಟನೆ 18:3 ಸಹ ನೋಡಿ).

ಆದಾಗ್ಯೂ 1,44,000 ಜನರು ಕ್ರಿಸ್ತನಿಗೆ ಪ್ರಾಮಾಣಿಕರಾಗಿ ಉಳಿಯುತ್ತಾರೆ ಮತ್ತು ಬಾಬೆಲ್ ಮತ್ತು ಮತಭ್ರಷ್ಟ ಸಭೆಗಳೊಂದಿಗಿನ ಸಂಬಂಧ ಹೊಂದಿ ಅಪವಿತ್ರರಾಗುವುದನ್ನು ವಿರೋಧಿಸುತ್ತದೆ. 1,44,000 "ಯಜ್ಞದ ಕುರಿಯಾದಾತನು ಎಲ್ಲಿ ಹೋದರೂ ಇವರು ಆತನ ಹಿಂದೆ ಹೋಗುವರು" (ಪ್ರಕಟನೆ 14:4). 1,44,000 ಜನರು ಮುಂದೆ "ಮನುಷ್ಯರೊಳಗಿಂದ ವಿಮೋಚಿಸಲ್ಪಟ್ಟವರು" ಎಂದು "ಯಜ್ಞದ ಕುರಿಯಾದಾತನಿಗೆ ಪ್ರಥಮ ಫಲದಂತಾದರು" ಎಂದು ವಿವರಿಸಲಾಗಿದೆ (ಪ್ರಕಟನೆ 14:4). ಪ್ರಾಚೀನ ಇಸ್ರಾಯೇಲ್ಯರಲ್ಲಿ, ಪ್ರಥಮ ಫಲವು ದೇವರಿಗೆ ಕೊಡುವ ಸುಗ್ಗಿಯ ಅತ್ಯುತ್ತಮ ಫಲವಾಗಿತ್ತು (ಅರಣ್ಯಕಾಂಡ 18:12). "ಪ್ರಥಮ ಫಲಗಳು" ಎಂಬ ಪದವು ಲೋಕದಿಂದ ಪ್ರತ್ಯೇಕಿಸಲ್ಪಟ್ಟು ರಕ್ಷಣೆ ಹೊಂದಿದ ಜನರನ್ನು ಉಲ್ಲೇಖಿಸಬಹುದು (ಯಾಕೋಬ 1:18). ಆದರೆ ಪ್ರಕಟನೆಯಲ್ಲಿ

1,44,000 ಜನರು ವಿಶೇಷ ಗುಂಪಿನವರೆಂದು ಸ್ಪಷ್ಟವಾಗಿದೆ. ಯಾಕೆಂದರೆ ಅವರು ಮರಣವನ್ನು ನೋಡದೆಯೇ ಮಾರ್ಪಡುವರು (1 ಕೊರಿಂಥದವರಿಗೆ 15:50–52). ಹೀಗಾಗಿ ಅವರು ಎಲ್ಲಾ ಯುಗಾಂತ್ಯಗಳವರೆಗೂ ರಕ್ಷಿಸಲ್ಪಟ್ಟ ದೊಡ್ಡ ಸುಗ್ಗಿಯ ಪ್ರಥಮ ಫಲಗಳಾಗಿದ್ದಾರೆ (ಪ್ರಕಟನೆ 14:14–16 ನೋಡಿ).

ನಮಗೆ ಗೊತ್ತಿರದೆ ಆತ್ಮೀಕ ಜಾರತ್ವ ತಪ್ಪನ್ನು ಮಾಡುವ ಅಪಾಯದಲ್ಲಿರುವ ಮಾರ್ಗಗಳು ಯಾವುವು? ನಾವು ಅಂತಹ ಅಪಾಯದಲ್ಲಿಲ್ಲವೆಂದು ಭಾವಿಸಿದರೆ ಸ್ವತಃ ನಾವೇ ಮೋಸ ಮಾಡಿಕೊಂಡಂತಾಗುತ್ತದೆ ಏಕೆ?

**ಗುರುವಾರ** **ಫೆಬ್ರವರಿ 7**

## ನಮ್ಮ ದೇವರು ಮತ್ತು ಕುರಿಮರಿಗೆ ರಕ್ಷಣೆ

ಪ್ರಕಟನೆ 14:5 ಜೊತೆಗೆ 2 ಪೇತ್ರ 3:14 ಮತ್ತು ಯೂದ 24,25 ಓದಿ. ಪ್ರಕಟನೆಯು ದೇವರ ಅಂತ್ಯಕಾಲದ ಜನರನ್ನು "ನಿರ್ದೋಷಿ"ಗಳೆಂದು ವಿವರಿಸುತ್ತದೆ. ಈ ಪದವಿಯನ್ನು ಹೇಗೆ ಸಾಧಿಸಬಲ್ಲದು?

1,44,000 ರ ಕೊನೆಯ ಗುಣಲಕ್ಷಣವೆಂದರೆ "ಅವರ ಬಾಯಲ್ಲಿ ಯಾವುದೇ ಸುಳ್ಳು ಸಿಕ್ಕಲಿಲ್ಲ: ದೇವರ ಸಿಂಹಾಸನದ ಮುಂದೆ ಇವರು ನಿರ್ದೋಷಿಗಳಾಗಿದ್ದಾರೆ" (ಪ್ರಕಟನೆ 14:5). ಲೋಕದ ಜನರು ಸೈತಾನನ ಸುಳ್ಳುಗಳನ್ನು ನಂಬಲು ಆಯ್ಕೆ ಮಾಡಿದರು, ದೇವರ ಅಂತ್ಯಕಾಲದ ಜನರು ನುಡಿಯಲ್ಲಿ ಅಥವಾ ನಡೆಯಲ್ಲಿ ಕಪಟವಿಲ್ಲದವರು, ರಕ್ಷಣೆ ಹೊಂದಲು ಸತ್ಯದ ಪ್ರೀತಿಯನ್ನು ಪಡೆಯುತ್ತಾರೆ (2 ಥೆಸಲೋನಿಕದವರಿಗೆ 2:10,11). 'ನಿರ್ದೋಷಿಗಳು' (ಗ್ರೀಕ್ ಅಮೊಮೋಸ್ "ನಿರಪರಾಧಿ") 1,44,000 ಕ್ರಿಸ್ತನಿಗೆ ತೋರಿಸುವ ನಿಷ್ಠೆಯನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ, ದೇವರ ಜನರನ್ನೂ ಪರಿಶುದ್ಧರಾಗಿರಲೂ ಕರೆದಿದ್ದಾರೆ ಯಾಜಕಕಾಂಡ 19:2, 1 ಪೇತ್ರ 2:9). ಅಬ್ರಹಾಮ (ಆದಿಕಾಂಡ 17:1) ಮತ್ತು ಯೋಬ (ಯೋಬ 1:1) ನಿರ್ದೋಷಿಗಳಾಗಿದ್ದರು. ಕ್ರೈಸ್ತರನ್ನು ಪರಿಶುದ್ಧರಾಗಿ ಮತ್ತು ದೇವರ ಮುಂದೆ ನಿರ್ದೋಷಿಗಳಾಗಿ ಕಾಣುವುದಕ್ಕೆ ಕರೆದಿದ್ದಾರೆ (ಎಫೆಸದವರಿಗೆ 5:27, ಫಿಲಿಪ್ಪಿಯರಿಗೆ 2:15). ರೋಮಾಪುರದವರಿಗೆ 3:19–

24 ನಿರ್ಧಾರಕ ಸತ್ಯವನ್ನು ನಮ್ಮ ಮುಂದೆ ಯಾವಾಗಲೂ ಇಟ್ಟುಕೊಳ್ಳಬೇಕು ಯಾಕೆ?

ಈ ಲೋಕದ ಇತಿಹಾಸದ ಅಂತ್ಯ ದಿನಗಳಲ್ಲಿ 1,44,000 ರ ಕ್ರಿಸ್ತನ ಗುಣವನ್ನು ಪ್ರತಿಬಿಂಬಿಸುತ್ತದೆ. ಅವರ ರಕ್ಷಣೆಯು ಅವರ ಸ್ವಂತ ಪರಿಶುದ್ಧತೆ ಮತ್ತು ಕಾರ್ಯದಿಂದಲ್ಲ, ಬದಲಾಗಿ ಕ್ರಿಸ್ತನು ಅವರಿಗೇನು ಮಾಡಿದ್ದನೆಂಬುದನ್ನು ಪ್ರತಿಬಿಂಬಿಸುತ್ತದೆ (ಎಫೆಸದವರಿಗೆ 2:8–10). 1,44,000 ತಮ್ಮ ನಿಲುವಂಗಿಯನ್ನು ಯಜ್ಞದ ಕುರಿಯಾದಾತನ ರಕ್ತದಲ್ಲಿ ತೊಳೆದುಕೊಂಡು ಶುಭ್ರ ಮಾಡಿಕೊಂಡಿದ್ದಾರೆ (ಪ್ರಕಟನೆ 7:14) ಮತ್ತು ಉದಾಹರಣೆಗೆ, ದೇವರ ಮುಂದೆ ನಿಷ್ಕಳಂಕ ಮತ್ತು ನಿರ್ದೋಷಿಯಾಗಿ ಕಂಡುಬರುತ್ತಾರೆ (2 ಪೇತ್ರ 3:14).

"ನಾವು ನಮ್ಮ ರಕ್ಷಕನ ಸ್ವರೂಪವನ್ನು ಪ್ರತಿಬಿಂಬಿಸುವವರೆಗೆ ಮತ್ತು 'ದೈವೀಕ ಸ್ವಭಾವದ ಪಾಲುದಾರರಾಗುವ' ತನಕ, ಎಲ್ಲಾ ಲೋಕದಾಶೆಯಿಂದ ಶುದ್ಧೀಕರಿಸಬೇಕು... ಜೀವನದ ಹೋರಾಟ ಕೊನೆಗೊಂಡಾಗ, ರಕ್ಷಾಕವಚವನ್ನು ಯೇಸುವಿನ ಪಾದಗಳಡಿಯಲ್ಲಿ ಇಟ್ಟಾಗ, ದೇವರ ಸಂತರು ಮಹಿಮೆಯೊಂದಿದಾಗ, ಆಗ ತಾನೇ ನಾವು ಪಾಲವಿಲ್ಲವೆಂದು ಮತ್ತು ರಕ್ಷಿಸಲ್ಪಟ್ಟಿದೆವೆಂದು ಹೇಳಿಕೊಳ್ಳುವುದು ಸುರಕ್ಷಿತವಾಗಿರುತ್ತದೆ" – ಎಲೆನ್ ಜಿ ವೈಟ್, ಸೆಲೆಕ್ಟೆಡ್ ಮೆಸೇಜಸ್, ಪುಸ್ತಕ 3, ಪುಟಗಳು 355, 356.

ನಾವು ನಿತ್ಯತೆಗಾಗಿ ಸಕ್ರಿಯ ಸಿದ್ಧತೆಯಲ್ಲಿ ಪವಿತ್ರೀಕರಣದ ಜೀವನವನ್ನು ಬದುಕ ಬಲ್ಲೆವು ಮತ್ತು ಪರಿಶುದ್ಧತೆಯ ಧರ್ಮಾಂಧತೆ ಮತ್ತು ಪರಿಪೂರ್ಣತೆಯ ಅಪಾಯದ ದುಷ್ಪರಿಣಾಮಗಳಿಂದ ಬಳಲುತ್ತವೆ ಹೇಗೆ?

**ಶುಕ್ರವಾರ** **ಫೆಬ್ರವರಿ 8**

**ಮುಂದಿನ ಆಲೋಚನೆ :** ಎಲೆನ್ ಜಿ ವೈಟ್, "ಸಿನ್‌ಲೆಸ್‌ನೆಸ್ ಮತ್ತು ಸಾಲ್ವೇಷನ್" ಪುಟಗಳು 353–357, ಇನ್ ಸೆಲ್ಕೆಟೆಡ್ ಮೆಸೇಜಸ್, ಪುಸ್ತಕ 3.

1,44,000 ರ ಗುರುತನ್ನು ವಿವಾದಾಸ್ಪದ ವಿಷಯವಾಗಿದೆ. ಈ ಭೂಮಿಯ ಇತಿಹಾಸದ ಅಂತ್ಯದ ದಿನಗಳಲ್ಲಿ 1,44,000 ದೇವರ ಜನರ ಕೊನೆಯ

ಪೀಳಿಗೆಯೆಂದು ಪ್ರಕಟನೆಯಲ್ಲಿ ಸ್ಪಷ್ಟವಾಗಿದೆ. ಅವರು ಕಷ್ಟ ಸಮಯದಲ್ಲಿ ಹಾದು ಹೋಗುತ್ತಾರೆಂದು ನಮಗೆ ಗೊತ್ತು ಮತ್ತು ಕೊನೆಯ ಏಳು ಉಪದ್ರವಗಳಿಂದ ರಕ್ಷಿಸಲ್ಪಡುತ್ತಾರೆ (ಕೀರ್ತನೆಗಳು 91:7–16) ಮತ್ತು ಅವರ ನಿಷ್ಠೆ ಹಿಂದೆ ಯಾವುದೇ ಪೀಳಿಗೆಯನ್ನು ಪರೀಕ್ಷಿಸಲಾಗುವುದಿಲ್ಲ. ನಿಖರವಾಗಿ ಯಾರು ಗುಂಪಿನಲ್ಲಿರುತ್ತಾರೆಂದು ನಮಗೆ ಬಹಿರಂಗವಾಗಿಲ್ಲ. ಅವರ ಗುರುತನ್ನು ದೇವರು ತನಗೆ ತಾನೇ ಇಟ್ಟುಕೊಂಡ ರಹಸ್ಯಗಳಲ್ಲಿ ಒಂದಾಗಿದೆ (ಧರ್ಮೋಪದೇಶಕಾಂಡ 29:29) ರಕ್ಷಿಸಲ್ಪಟ್ಟ ಸಂತರ ಗುಂಪಿನ ಭಾಗವಾಗಿ ಯಾರು ಪಾಲುದಾರರಾಗುತ್ತಾರೆಂದು ಭವಿಷ್ಯವು ಮಾತ್ರ ಪ್ರಕಟಿಸುತ್ತದೆ. ಈ ರಹಸ್ಯದ ಬಗ್ಗೆ ನಮಗೆ ಎಚ್ಚರಿಕೆ ನೀಡಲಾಗಿದೆ :

"ಕ್ರಿಸ್ತನು ಹೇಳುತ್ತಾರೆ ಸಭೆಯಲ್ಲಿರುವವರು ಕಟ್ಟು ಕಥೆಗಳು, ತರ್ಕಗಳನ್ನು ಪ್ರಸ್ತುತ ಪಡಿಸುವವರು, ದೇವರು ಪ್ರಧಾನವಾದ, ವೈಭವ, ಘನವಂತ ಮಾಡುವ ಸತ್ಯಗಳನ್ನು ಮನಸ್ಸಿನ ಖಜಾನೆಯ ಮನೆಯಲ್ಲಿ ಯಾವಾಗಲೂ ಇರಿಸಲು ಕೊಟ್ಟಿದ್ದಾರೆ. ಮನುಷ್ಯರು ಈ ಸಿದ್ಧಾಂತ ಮತ್ತು ಆ ಸಿದ್ಧಾಂತವನ್ನು ಎತ್ತಿಕೊಳ್ಳುವಾಗ, ಅವರಿಗೆ ಅಗತ್ಯವಿಲ್ಲದ್ದನ್ನು ಕುತೂಹಲದಿಂದ ತಿಳಿದುಕೊಳ್ಳಲು ಬಯಸಿದಾಗ, ದೇವರು ಅವುಗಳನ್ನು ಮುನ್ನಡೆಸುತ್ತಿಲ್ಲವೆಂದು ಅವರು ಗಮನದಲ್ಲಿಡಬೇಕು. ಅವರು ಮಾಡಬೇಕಾದ ಯಾವುದನ್ನಾದರೂ ಮಾಡಬೇಕೆಂದು ಪ್ರಸ್ತುತ ಪಡಿಸಿದರೆ ಅದು ವಾಕ್ಯದಲ್ಲಿ ಉಪದೇಶಿಸಿಲ್ಲ, ಇದು ಆತನ ಆಲೋಚನೆಯೂ ಅಲ್ಲ. ಅವರಿಗೆ ಆಧ್ಯಾತ್ಮಿಕವಾಗಿ ಉಪಯೋಗವಾಗದಂತ ಪ್ರಶ್ನೆಗಳ ವಿವಾದಕ್ಕೊಳಗಾಗ ಬೇಕಾಗಿರುವುದು ಆತನ ಚಿತ್ತವಲ್ಲ. ಒಂದು ಲಕ್ಷದ ನಲವತ್ತು ನಾಲ್ಕು ಸಾವಿರ ಜನರನ್ನು ರಕ್ಷಿಸುವವರು ಯಾರು? ದೇವರಿಂದ ಚುನಾಯಿತರಾದವರು ಸ್ವಲ್ಪ ಸಮಯದಲ್ಲೇ ಪ್ರಶ್ನೆಯಿಲ್ಲದೆಯೇ ಗೊತ್ತಾಗುತ್ತದೆ" – ಎಲೆನ್ ಜಿ ವೈಟ್, ಸೆಲೆಕ್ಟೆಡ್ ಮೆಸೇಜಸ್, ಪುಸ್ತಕ 1, ಪುಟ 174.

## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ಕೆಳಗಿನ ಬುದ್ಧಿವಾದದ ಬಗ್ಗೆ ಯೋಚಿಸಿ : "ಒಂದು ಲಕ್ಷದ ನಾಲ್ವತ್ತು ನಾಲ್ಕು ಸಾವಿರ (1,44,000) ಜನರಲ್ಲಿ ಜೊತೆ ಸೇರಲು ದೇವರು ನಮಗೆ

ಕೊಟ್ಟ ಎಲ್ಲಾ ಶಕ್ತಿಯಿಂದ ನಾವು ಶ್ರಮಿಸಬೇಕು" – ಎಲೆನ್ ಜಿ ವೈಟ್ ಕಾಮೆಂಟ್ಸ್, ದ ಎಸ್.ಡಿ.ಎ ಬೈಬಲ್ ಕಾಮೆಂಟರಿ, ಸಂಪುಟ 7, ಪುಟ 970. ಈ ವಾಕ್ಯವನ್ನು ನೀವು ಅಭ್ಯಾಸದಲ್ಲಿ ಹೇಗೆ ಹಾಕಬಹುದು? ಇದು ನಿಮ್ಮ ನಿರ್ಧಾರವನ್ನು ಹೇಗೆ ಪ್ರಭಾವಿಸುತ್ತದೆ?

2. 1,44,000 ದ ಅಂತ್ಯಕಾಲ ಸಂತರುಗಳ ಒಂದು ಗುಣಲಕ್ಷಣವೆಂದರೆ ಹೊಸ ಹಾಡನ್ನು ಹಾಡುತ್ತಾರೆ. ಈ ಹಾಡನ್ನು ಯಾರಿಂದಲೂ ಹಾಡಲು ಸಾಧ್ಯವಿಲ್ಲ. ಯಾಕೆಂದರೆ ಇದು ಅನುಭವದ ಹಾಡಾಗಿದೆ– ಇತಿಹಾಸದಲ್ಲೇ ಯಾವುದೇ ಗುಂಪು ಆ ಅನುಭವವನ್ನು ಹೊಂದಿಲ್ಲ (ಪ್ರಕಟನೆ 14:3,4; ಪ್ರಕಟನೆ 15:23). ನೀವು ನಿಮ್ಮ ವೈಯಕ್ತಿಕ ಜೀವನ ಬಗ್ಗೆ ಯೋಚಿಸಿದಂತೆ, ನಿಮ್ಮ ಈಗಿನ ಆಧ್ಯಾತ್ಮಿಕ ನಡತೆಯು ದೇವರೊಂದಿಗೆ ಹೊಸ ಅನುಭವದ ಹಾಡನ್ನು ಹೇಗೆ ಪ್ರತಿಬಿಂಬಿಸುತ್ತದೆ? ಅಥವಾ ನಿಮ್ಮ ಜೀವಿತ ಹಿಂದಿನ ಹಳೆ ಕಥೆಗಳನ್ನು ದೇವರು ನಿಮ್ಮ ಜೀವಿತದಲ್ಲಿ ಮಾಡುವ ಕೆಲಸವನ್ನು ಪ್ರತಿಬಿಂಬಿಸುತ್ತದೆಯೇ, ಪ್ರಸ್ತುತ ಬದ್ಧತೆಯ ಪುರಾವೆ ಇಲ್ಲವೇ? ನಿಮ್ಮ ಜೀವನವನ್ನು ಪುನಃ ಆತನಿಗೆ ಒಪ್ಪಿಸಲು ನೀವು ಈಗ ಯಾವ ಬದಲಾವಣೆಗಳನ್ನು ಮಾಡಬಹುದು?

3. ಕ್ರಿಸ್ತನ ಬಗ್ಗೆ ಕೇವಲ ತಿಳುವಳಿಕೆ ಮತ್ತು ನಿಜವಾಗಿಯೂ ಅವರನ್ನು ತಿಳಿದುಕೊಳ್ಳುವುದರ ನಡುವಿನ ವ್ಯತ್ಯಾಸವೇನು? ಯಾರಾದರೂ ನಿಮ್ಮನ್ನು ಕೇಳಬೇಕೆಂದರೆ "ಕ್ರಿಸ್ತನಂತೆ ಏನು?" ನೀವು ಏನೆಂದು ಉತ್ತರಿಸುತ್ತೀರಿ, ಮತ್ತು ಏಕೆ?